# ಒರ್ಟೆಗಾ ಗೊತ್ತಾ?


ಬಿಲ್ ಗೇಟ್ಸ್ ಗೊತ್ತು, ಜೂಕರ್‌ಬರ್ಗ್ ಗೊತ್ತು. ಆದರೆ ಇದ್ಯಾರಪ್ಪಾ ಅಮಾನ್ಸಿಯೊ ಒರ್ಟೆಗಾ...? ಎನ್ನುವ ಪ್ರಶ್ನೆ ಸಹಜವೇ. ಈ ವರ್ಷ ಎರಡು ಬಾರಿ ‘ವಿಶ್ವದ ನಂಬರ್ ಒನ್ ಶ್ರೀಮಂತ’ ಎನ್ನುವ ಬಿರುದನ್ನು ಪಡೆದಾತ ಈ ಒರ್ಟೆಗಾ! ಜಗತ್ತಿನ ‘ಟಾಪ್ ಟೆನ್’ ಕೋಟ್ಯಾಧೀಶರ ಪಟ್ಟಿ ಪ್ರಕಟಿಸುವ ‘ಫೋರ್ಬ್ಸ್’ ಮ್ಯಾಗಸಿನ್ ತನ್ನ ಪಟ್ಟಿಯಲ್ಲಿ ಎರಡು ಸಲ ‘ಶ್ರೀಮಂತಿಕೆಯಲ್ಲಿ ಬಿಲ್ ಗೇಟ್ಸ್ ನನ್ನು ಹಿಂದಿಕ್ಕಿದ ಭಾರೀ ಶ್ರೀಮಂತ’ ಎಂದು ಅಮಾನ್ಸಿಯೊ ಒರ್ಟೆಗಾನನ್ನು ಪರಿಚಯಿಸಿತು. ಈ ವರ್ಷ ಆತನ ಒಟ್ಟು ಆಸ್ತಿಯ ಮೊತ್ತ 79.5 ಶತಕೋಟಿ ಡಾಲರ್ ಎಂದು ಪ್ರಕಟಿಸಿತು.

ಒರ್ಟೆಗಾನ ಹೆಸರು ಗೊತ್ತಿಲ್ಲದ ಕೋಟ್ಯಂತರ ಜನರಿಗೂ ‘ಝಾರಾ’ ಬ್ರ್ಯಾಂಡ್‌ನ ಹೆಸರು ಗೊತ್ತಿದೆ. ಸ್ಪೇನ್ ಮೂಲದ ಇಂಡಿಟೆಕ್ಸ್ ಕಂಪೆನಿಯ ಮೂರು ಜಗತ್ಪ್ರಸಿದ್ಧ ಬ್ರ್ಯಾಂಡ್‌ಗಳಲ್ಲಿ ಇದು ಮೊದಲನೇ ಸ್ಥಾನದಲ್ಲಿದೆ. 100 ಶತಕೋಟಿ ವಾರ್ಷಿಕ ವಹಿವಾಟು ದಾಟಿದ ಸ್ಪೇನ್‌ನ ಮೂರನೇ ದೊಡ್ಡ ಕಂಪೆನಿ. ಇವತ್ತು ಆ ಎರಡು ಕಂಪೆನಿಗಳನ್ನು ಹಿಂದಿಕ್ಕಿ ಇಂಡಿಟೆಕ್ಸ್ ಮುನ್ನಡೆದಿದೆ. ವಿಶ್ವದ ‘ನಂಬರ್ ಒನ್’ ಬಟ್ಟೆ ಬ್ರ್ಯಾಂಡ್ ಝಾರಾ. ಜಗತ್ತಿನ ನೂರು ದೇಶಗಳಲ್ಲಿ ಒಟ್ಟು 7000ಕ್ಕೂ ಹೆಚ್ಚು ಷೋರೂಮ್‌ಗಳನ್ನು ಹೊಂದಿರುವ ಬಟ್ಟೆ ಬ್ರ್ಯಾಂಡ್ ಇದು! ಜಗತ್ತಿನ ಕೋಟ್ಯಾಧೀಶ ಉದ್ಯಮಿಗಳೆಲ್ಲರೂ ಧರಿಸುವ ‘ಮಸಿಮೊ ಡುಟ್ಟಿ’ ಮತ್ತು ‘ಪುಲ್ ಎಂಡ್ ಬೇರ್’ ಈ ಕಂಪೆನಿಯ ಇನ್ನೆರಡು ಪ್ರಖ್ಯಾತ ಬ್ರ್ಯಾಂಡ್‌ಗಳು. ಫ್ಯಾಶನ್‌ಲೋಕದ ವಿಶ್ವವಿಖ್ಯಾತ ಸೂಪರ್ ಮಾಡೆಲ್‌ಗಳಾದ ಕಿಮ್ ಕರ್ದಾಶಿಯಾನ್ ಮತ್ತು ಕೇಟ್ ಮಿಡ್ಲ್‌ಟನ್ ಕೂಡಾ ಸದಾ ‘ಝಾರಾ’ ಬಟ್ಟೆಗಳನ್ನೇ ಧರಿಸುತ್ತಾರೆ. ಈ ಇಂಡಿಟೆಕ್ಸ್ ಕಂಪೆನಿಯ ಮಾಲೀಕನೇ ಅಮಾನ್ಸಿಯೊ ಒರ್ಟೆಗಾ.

80ರ ಅಜ್ಜ ಒರ್ಟೆಗಾಗೆ ಏಕೈಕ ಮಗಳು ಮಾರ್ತಾ. ಕಳೆದ ವಾರ ಈತ ತನ್ನೆಲ್ಲ ವಹಿವಾಟನ್ನೂ ಮಗಳಿಗೆ ವಹಿಸಿಕೊಟ್ಟು ‘ರಿಟೈರ್ಡ್’ ಆಗಲಿದ್ದಾನೆ ಎನ್ನುವ ಸುದ್ದಿ ಹಬ್ಬಿತ್ತು. ಆಮೇಲೆ ನೋಡಿದರೆ, ‘ಇಲ್ಲ, ಆಕೆ ಇನ್ನೂ ಯಾವುದೋ ಕಂಪೆನಿಯಲ್ಲಿ ಮ್ಯಾನೇಜ್‌ಮೆಂಟ್‌ನ ಅನುಭವ ಪಡೆಯುತ್ತಿದ್ದಾಳೆ. ಇಷ್ಟು ಬೇಗ ಅಪ್ಪನ ಬಿಸಿನೆಸ್ ಪೂರ್ತಿ ಮೇಲ್ವಿಚಾರಣೆ ವಹಿಸಿಕೊಳ್ಳುವುದಿಲ್ಲ’ ಎಂದಾಯಿತು.

ಒರ್ಟೆಗಾ ಸರಳ ಮನುಷ್ಯ. ಕೋಟ್ಯಾಧೀಶರಿಗೆ ಇರುವ ಯಾವ ಚಟಗಳೂ ಈತನಿಗೆ ಇಲ್ಲ! ಸಾರ್ವಜನಿಕ ಭಾಷಣ ಮಾಡುವುದಿಲ್ಲ. ಪತ್ರಿಕೆ, ಟೀವಿಗಳಿಗೆ ಸಂದರ್ಶನ ನೀಡುವುದಿಲ್ಲ; ಫೋಟೋ ತೆಗೆಸಿಕೊಳ್ಳುವುದಿಲ್ಲ. ಸಭೆ, ಸಮಾರಂಭಗಳಿಂದ ಗಾವುದ ದೂರ. ಎಲ್ಲಿವರೆಗೆ ಎಂದರೆ, 2001ರಲ್ಲಿ ಈತನ ಕಂಪೆನಿ ಮೊದಲ ಬಾರಿಗೆ ನ್ಯೂಯಾರ್ಕ್ ಷೇರುಪೇಟೆಯಲ್ಲಿ ಲಿಸ್ಟ್ ಆದಾಗ, ಅದರ ‘ಗಂಟೆ ಬಾರಿಸುವ ಸಮಾರಂಭ’ಕ್ಕೂ ಈತ ಹಾಜರಾಗಲಿಲ್ಲ!

ಸ್ಪೇನ್‌ನಲ್ಲಿ ರೈಲ್ವೆ ಕಾರ್ಮಿಕನೊಬ್ಬನ ಮಗನಾಗಿ ಹುಟ್ಟಿದ ಅಮಾನ್ಸಿಯೊ ಒರ್ಟೆಗಾ, 14ರ ವಯಸ್ಸಿನಲ್ಲಿ ಶರ್ಟ್ ತಯಾರಿಸುತ್ತಿದ್ದ ಪುಟ್ಟ ಅಂಗಡಿಯೊಂದರಲ್ಲಿ ‘ಡೆಲಿವರಿ ಬಾಯ್’ ಆಗಿ ಕೆಲಸ ಆರಂಭಿಸಿದಾತ. ಮದುವೆಯಾದ ಬಳಿಕ ಹೆಂಡತಿಯ ಜತೆ ಸೇರಿ ತನ್ನದೇ ಆದ ವರ್ಕ್‌ಶಾಪ್ ಶುರು ಮಾಡಿದ. ನೈಟ್‌ಗೌನ್, ಒಳ ಉಡುಪು ಮತ್ತು ಬೇಬಿ ಡ್ರೆಸ್‌ಗಳನ್ನು ಸ್ವತಃ ಹೊಲಿಯತೊಡಗಿದ. ಇದೊಂದು ತರಹ ಫ್ಯಾಮಿಲಿ ಬಿಸಿನೆಸ್. ಬೆಳೆಯುತ್ತಾ ಹೋದಂತೆ ತನ್ನದೇ ಆದ ಮೊದಲ ಝಾರಾ ಬ್ರ್ಯಾಂಡ್ ಷೋರೂಮ್ ಅನ್ನು 1975ರಲ್ಲಿ ತೆರೆದ. ಒಂದೊಂದಾಗಿ ಷೋರೂಮ್‌ಗಳ ವಿಸ್ತರಣೆ ಮಾಡಿದ. ಸ್ಪೇನ್ ನಿಂದ ಅಮೆರಿಕಕ್ಕೆ ಜಿಗಿದ. ಯೂರೋಪ್ ಆವರಿಸಿದ. ಏಷ್ಯಾ, ಆಫ್ರಿಕಾದ ದೇಶಗಳಿಗೆ ಪ್ರವೇಶಿಸಿದ. ಈಗ ಝಾರಾ ಜಗತ್ತಿನ ನಂಬರ್ ಒನ್ ಬ್ರ್ಯಾಂಡ್.



ಇವತ್ತಿಗೂ ಒರ್ಟೆಗಾ ತನ್ನ ಕಂಪೆನಿಯ ಲೆಕ್ಕಪತ್ರಗಳನ್ನು ಖುದ್ದಾಗಿ ಪರಿಶೀಲಿಸುತ್ತಾನೆ. ಪ್ರತಿದಿನದ ಮಾರಾಟ ಅಂಕಿಗಳನ್ನು ಗಮನಿಸುತ್ತಾನೆ. ಮಳಿಗೆಗಳಲ್ಲಿ ಮ್ಯಾನೇಜರ್‌ಗಳ ಮಾತುಗಳನ್ನು ಕೇಳುವುದಕ್ಕಿಂತ ಹೆಚ್ಚಾಗಿ ಸೇಲ್ಸ್‌ಮನ್ ಮತ್ತು ಡೆಲಿವರಿ ಬಾಯ್‌ಗಳ ಮಾತುಗಳನ್ನು ಗಮನವಿಟ್ಟು ಕೇಳುತ್ತಾನೆ. ಅವರಿಂದ ಗ್ರಾಹಕರ ಫೀಡ್‌ಬ್ಯಾಕ್ ಪಡೆದು ತಾನೇ ಖುದ್ದಾಗಿ ಹೊಸ ಡಿಸೈನ್‌ಗಳ ಮೇಲ್ವಿಚಾರಣೆ ಮಾಡುತ್ತಾನೆ. ಅದೇ ಆತನ ಯಶಸ್ಸಿನ ಗುಟ್ಟು ಎನ್ನುತ್ತಾರೆ ನಿಕಟ ಸ್ನೇಹಿತರು.

ಮೊದಲ ಪತ್ನಿ 2013ರಲ್ಲಿ ಸಾವನ್ನಪ್ಪಿದ ಬಳಿಕ ಇತ್ತೀಚೆಗೆ ಒರ್ಟೆಗಾ ಫ್ಲೋರಾ ಎಂಬಾಕೆಯನ್ನು ಮದುವೆಯಾಗಿದ್ದಾನೆ. ಈಗ ಆಕೆಯೂ ಕಂಪೆನಿಯಲ್ಲಿ ನಿರ್ದೇಶಕಿಯಾಗಿ ತೊಡಗಿಸಿಕೊಂಡಿದ್ದಾಳೆ.

ಒರ್ಟೆಗಾನ ಶ್ರೀಮಂತಿಕೆ ದುಪ್ಪಟ್ಟಾಗಲು ಆತ ರಿಯಲ್ ಎಸ್ಟೇಟ್‌ನಲ್ಲಿ ಸಕಾಲಿಕವಾಗಿ ನಡೆಸಿದ ಹೂಡಿಕೆಯೇ ಕಾರಣ ಎನ್ನಲಾಗುತ್ತಿದೆ. ಬಟ್ಟೆ ಕಂಪೆನಿಯಲ್ಲಿ ಬಂದ ಲಾಭವನ್ನೆಲ್ಲ ಹೊಸ ಕಟ್ಟಡಗಳನ್ನು, ಜಮೀನನ್ನು ಖರೀದಿಸಲು ತೊಡಗಿಸಿದ ಒರ್ಟೆಗಾ ಜಗತ್ತಿನ ಬಹುತೇಕ ನಗರಗಳಲ್ಲಿ ಸ್ವಂತ ಆಸ್ತಿ ಹೊಂದಿದ್ದಾನೆ. ಅದರಿಂದ ನಿಗದಿತವಾಗಿ ಬರುವ ಬಾಡಿಗೆಯೇ ದೊಡ್ಡ ಆದಾಯ. ಲಂಡನ್‌ನಿಂದ ಹಿಡಿದು ನ್ಯೂಯಾರ್ಕ್‌ವರೆಗೆ ಈತ ಖರೀದಿಸಿದ ಗಗನಚುಂಬಿ ಬಿಲ್ಡಿಂಗ್‌ಗಳೆಲ್ಲವೂ ‘ನಗದು ಖರೀದಿ’ ಎಂದರೆ ನಂಬಲೇಬೇಕು! ಸಾಲ ಮಾಡಿ ಆಸ್ತಿ ಖರೀದಿಸುವುದರಲ್ಲಿ ಈತನಿಗೆ ಆಸಕ್ತಿ ಇಲ್ಲವಂತೆ! ಎಷ್ಟೊಂದು ಸ್ವಂತ ಕಟ್ಟಡಗಳಿವೆ ಎಂದರೆ, ಈತನ ಕಂಪೆನಿಯ ಬಹುದೊಡ್ಡ ಪ್ರತಿಸ್ಪರ್ಧಿ ಕಂಪೆನಿಗಳಾದ ಸ್ವೀಡನ್ನಿನ ‘ಎಚ್ ಎಂಡ್ ಎಮ್’ ಮತ್ತು ಅಮೆರಿಕದ ‘ಗ್ಯಾಪ್’ ಬ್ರ್ಯಾಂಡ್‌ನ ಎಷ್ಟೋ ಷೋರೂಮ್‌ಗಳ ಒಡೆತನವೂ ಈತನಿಗೇ ಸೇರಿದ್ದು!

ಈತ ‘ಮಹಾಲಾಭಕೋರ’ ಎಂಬ ಆರೋಪವೂ ಇದೆ. ಝಾರಾ ಬ್ರ್ಯಾಂಡ್ ಬಟ್ಟೆಯ ಬೆಲೆ ನಿಗದಿ ಮಾಡುವಾಗ ಡಾಲರ್‌ನ ಮೌಲ್ಯ ಏರಿಳಿತವಾದಂತೆ ಬೆಲೆಯನ್ನೂ ಏರಿಸುತ್ತಾನೆ. “double price tag‘ ಮೂಲಕ ಗ್ರಾಹಕರಿಗೆ ವಂಚನೆ ನಡೆದಿದೆ ಎಂದು ‘ಡೇಲಿ ಮೇಲ್’ನಲ್ಲಿ ತನಿಖಾ ವರದಿಯೊಂದು ಪ್ರಕಟವಾಗಿತ್ತು. ಆದರೆ ಅದಕ್ಕೆಲ್ಲ ಈತ ತಲೆ ಕೆಡಿಸಿಕೊಂಡಿಲ್ಲ. ಜಗತ್ತಿನ ಮಹಾಶ್ರೀಮಂತರೆಲ್ಲ ಬ್ರ್ಯಾಂಡ್ ಮೊರೆ ಹೋಗಿರುವಾಗ ಬೆಲೆಯ ಮುಖ ಯಾರು ನೋಡುತ್ತಾರೆ? “grow or die’ ಎನ್ನುವುದು ಈತನ ಯಶಸ್ಸಿನ ಮಂತ್ರ. ‘ವೇಗ, ಗ್ರಾಹಕರ ಇಷ್ಟವೇ ನನ್ನ ತೆವಲು, ಪೂರೈಕೆಯ ಮೇಲೆ ಪೂರ್ಣ ನಿಯಂತ್ರಣ, ಮೂಲಕ್ಕೆ ನಿಷ್ಠೆ ಮತ್ತು ನಿರಂತರ ಸಂಶೋಧನೆಯೇ ನನ್ನ ಯಶಸ್ಸಿನ ಗುಟ್ಟು’ ಎನ್ನುತ್ತಾನೆ ಅಮಾನ್ಸಿಯೊ!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65